







**ಮೀನು ಸಾರು**
ಇಂಗ್ಲಿಷ್ ಮೂಲ: ರಿಚಾ ಝಾ, ಸುಮಂತ ದೇ
ಕನ್ನಡಕ್ಕೆ: ನಾಗಮಣಿ ಎಸ್.ಎನ್.
ಪುಟ: 40, ಬೆಲೆ: ರೂ. 130

**ಆದಿಲ್ ಮಾತಾಡಿದರೆ ಪದಗಳು ಕುಣಿಯುತ್ತವೆ**
ಇಂಗ್ಲಿಷ್ ಮೂಲ: ಲಾವಣ್ಯ ಕಾರ್ತಿಕ್
ಕನ್ನಡಕ್ಕೆ: ಗಿರೀಶ್ ಜಕಾಪುರೆ
ಪುಟ: 36, ಬೆಲೆ: ರೂ. 130




**ಅಪ್ಪುಕುಟ್ಟನನ್ನು ತೂಗುವುದು ಹೇಗೆ?**
ಇಂಗ್ಲಿಷ್ ಮೂಲ: ಇಂದು ಹರಿಕುಮಾರ್
ಕನ್ನಡಕ್ಕೆ: ಅನಿತಾ ಪ್ರಿಯಕಾರಿಣಿ ಕಲ್ಲೆ
ಪುಟ: 16, ಬೆಲೆ: ರೂ. 100

ಮಕ್ಕಳಿಗೆ ಗುಟುಕು ಕೊಡುವ ಚಿತ್ರದೊಂದಿಗೆ ಈ ಸಂಪುಟದ ಬೋನಸ್ ಆಗಿ 14ನೇ ಪುಸ್ತಕ ರೂಪುಗೊಂಡಿದೆ. ಉದಾಹರಣೆಗೆ, ‘ಒಂದು ಬಕೆಟ್ಟಿನಲ್ಲಿ ಸಮುದ್ರ’ (ಆವೇಹಿ-ಅಬಾಕಸ್ ಕಥೆ, ಲೇ: ದೀಪಾ ಬಲ್ಸಾವರ್ ಮತ್ತು ಪ್ರೀತಿ ರಾಜವಾಡೆ, ಕನ್ನಡಕ್ಕೆ: ಕಿರಣ್ ಭಟ್). ಕಥೆ ಹೀಗಿದೆ: ಸೋನುವಿನ ಮನೆಯ ಬಕೆಟ್‌ಗೆ ನಲ್ಲಿಯಿಂದ ನೀರು ಬಂದು ತುಂಬುತ್ತದೆ. ಆ ನೀರು ಇಲ್ಲಿಯ ತನಕ ಹೇಗೆ ಬಂದಿತು ಎಂಬುದು ಸೋನುವಿನ ಮನದಲ್ಲಿ ಮೂಡುವ ಪ್ರಶ್ನೆ. ಈ ಕುತೂಹಲವನ್ನು ಅನುಸರಿಸಿ ಹೆಜ್ಜೆಯಿಡುತ್ತಾ ನೀರಿನ ಜಾಡನ್ನೇ ಕಥೆ ಅನಾವರಣಗೊಳಿಸುತ್ತದೆ.

ಕೊಳವೆಗಳು, ಕೆರೆ, ನದಿ, ಸಮುದ್ರ, ಆಕಾಶ, ಮೋಡ, ಬೆಟ್ಟ, ಮಳೆ ಎಂದು ಹಿರಿದಾದ ಜಗತ್ತನ್ನು ಮಕ್ಕಳಿಗೆ ಕಥೆಯ ರೂಪದಲ್ಲಿ ಪರಿಚಯಿಸಲಾಗಿದೆ. ಓದಿನ ರುಚಿ ಹೆಚ್ಚಿಸಲು ಸೊಗಸಾದ ಚಿತ್ರಗಳು ಪುಟಗಳನ್ನು ಆವರಿಸಿಕೊಂಡಿವೆ.

ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಾ ನೋವುಣ್ಣುತ್ತಿರುವ ತಾಯಿಯನ್ನು ಗಮನಿಸುವ ಮಗುವಿನ (‘ಅಮ್ಮ ಮತ್ತು ನಾನು’, ಲೇ: ಮಮತ ಸೈನಿ ಮತ್ತು ಸಂಕೇತ್ ಪೆಟ್ಕರ್; ಕನ್ನಡಕ್ಕೆ: ಕುಸುಮ ಪಟೇಲ್) ಕಥೆ ವಿಭಿನ್ನವಾದುದು. ಚಿಕಿತ್ಸೆ ಪಡೆದು ಅಮ್ಮ ಮನೆಗೆ ಬಂದದ್ದು ಮಗಳಿಗೆ ಖುಷಿಯಾದರೂ, ಅಮ್ಮನ ಉದ್ದನೆಯ ಕೂದಲು ಕಳೆದುಹೋದುದನ್ನು ಒಪ್ಪಿಕೊಳ್ಳಲು ಆ ಪುಟಾಣಿ ಕಷ್ಟಪಡುತ್ತಾಳೆ. ತನ್ನ ತಳಮಳ ಕಷ್ಟಗಳನ್ನು ಆ ಪುಟಾಣಿ ಮಗಳು ಹೇಗೆ ಸ್ವೀಕರಿಸುತ್ತಾಳೆ ಎನ್ನುವ ಕುತೂಹಲ ಕಥೆಯಲ್ಲಿದೆ.

ಮಾನವಸಂಬಂಧಗಳು ಏಕರೂಪದಲ್ಲಿ ಇರುವುದಿಲ್ಲ. ಅದರ ಸೂಕ್ಷ್ಮತೆಯನ್ನು ಬಿಂಬಿಸುವ ಕಥೆಯಲ್ಲಿ, ಗೋಪು ಕಣ್ಣು ಕಾಣದ ಹುಡುಗ. ಅವನ ಮನಸ್ಸಿನಲ್ಲಿ ಒಂದು ಆಸೆ ಮೂಡುತ್ತದೆ: ಅನಾರೋಗ್ಯದಿಂದ ಮಲಗಿದ್ದ ಅಪ್ಪನಿಗೆ ತಾನೇ ಮೀನುಸಾರು ಮಾಡಿ ಬಡಿಸಬೇಕು. ಅಪ್ಪನಿಗೆ ಗೊತ್ತಾಗದಂತೆ ಮನೆಯಿಂದ ಹೊರಗೆ ಬರುವ ಗೋಪು, ತಾನೇ ಮಾರುಕಟ್ಟೆಗೆ ಹೋಗಿ ಮೀನು ತರುತ್ತಾನೆ. ಅಜ್ಜಿ ಸಾರು ಮಾಡಿ ಕೊಟ್ಟರೆ ಅಪ್ಪನಿಗೆ ಖುಷಿಯಾಗಬಹುದು ಎಂದು ಅಜ್ಜಿಯನ್ನು ರಮಿಸುತ್ತಾನೆ. ಹೀಗೆ ಮೀನು ಸಾರನ್ನು